(ಕರ್ನಾಟಕ ಸರ್ಕಾರ)

# ತಹಸೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ದೂರವಾಣಿ ಸಂಖ್ಯೆ:-08397-238 255 E Mail: tahhbhele@gmail.com Pin Code-583 212

ನಂ/ಕಂ/ಪಹಣಿ/ವಿವಾದ/02/2016.17; ದಿನಾಂಕ: 30 .06.2016

| ವಾದಿ | ಪ್ರತಿವಾದಿ |
|---|---|
| ಅಡವಿಸ್ವಾಮಿ ತಾಯಿ ನಾಯ್ಕರ ಗೋಣೆಮ್ಮ | ತಳವಾರ ಹನುಮಪ್ಪ ತಾಯಿ ಸಣ್ಣಹನುಮವ್ವ |
| ಗುಳೇದಾಳು ಗ್ರಾಮ, ಹಗರಿಬೊಮ್ಮನಹಳ್ಳಿ(ತಾ) | ಬಂಡಿಹರ್ಲಾಪುರ ಗ್ರಾಮ, ಕೊಪ್ಪಳ(ತಾ&ಜಿ) |

ಉಪಸ್ಥಿತರು:**ಕೆ.ಬಿ.ಆನಂದಪ್ಪನಾಯಕ್,** ಕ.ಆ.ಸೇ
**ತಹಶೀಲ್ದಾರರು**
**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಹಲಗಾಪುರ ಗ್ರಾಮದ ಸರ್ವೆ ನಂ.419/ಬಿ ವಿ: 04.00 ಎಕರೆ ಜಮೀನನ್ನು ಪೋತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಹಲಗಾಪುರ ಗ್ರಾಮದ ಸರ್ವೆ ನಂ.419/ಬಿ ವಿ: 04.00 ಎಕರೆ ಜಮೀನನ್ನು ಪೋತಿ ವಾರಸು ಪ್ರಕಾರ ಹಕ್ಕುಬದಲಾವಣೆ ಕೋರಿ ವಾದಿಯು ಅರ್ಜಿಸಲ್ಲಿಸಿದ್ದು ವಾದಿಯ ಕೋರಿಕೆ ಪ್ರಕಾರ ಹಕ್ಕುಬದಲಾವಣೆಗೆ ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ ಪ್ರತಿವಾದಿಯು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-61/2015-16; ದಿ: .04.16ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-21.05.16 ರಿಂದ ದಿ:-30.06.2016ರ ವರೆಗೆ ಕಾಲಾವಕಾಶ ನೀಡಿ ವಿಚಾರಣೆ ಮಾಡಲಾಯಿತು. ವಿಚಾರಣೆಗೆ ಉಭಯರು ಹಾಜರಾಗಿರುತ್ತಾರೆ. ವಾದಿಯ ಕೋರಿಕೆ ಬಗ್ಗೆ ತಕರಾರು ಅರ್ಜಿ ದಾಖಲಿಸಿರುವ ಪ್ರತಿವಾದಿಯನ್ನು ವಿಚಾರಣೆ ಮಾಡಲಾಗಿ, ವಿವಾದಿತ ಜಮೀನಿನ ಹಾಲಿ ಪಟ್ಟಾದಾರರಾದ ಶ್ರೀ ತಳವಾರ ಸಣ್ಣಹನುಮಪ್ಪ ಮತ್ತು ದೊಡ್ಡಹನುಮಪ್ಪ ಇವರುಗಳಿಗೆ ವಿವಾಹವಾಗಿದ್ದು ಅವರ ವಾರಸುದಾರರಾಗಿ ನಾವುಗಳು ಇರುತ್ತೇವೆ ಆದರೆ ವಾದಿಯು ಹಕ್ಕುಬದಲಾವಣೆ ಅರ್ಜಿಯೊಂದಿಗೆ ಸಲ್ಲಿಸಿರುವ ವಂಶವೃಕ್ಷ ದಾಖಲೆಯಲ್ಲಿ ಹಾಲಿ ಪಟ್ಟಾದಾರರನ್ನು ಅವಿವಾಹಿತರೆಂದು ಮತ್ತು ನಾಯ್ಕರ ಗೋಣೆಮ್ಮಳ

ಸಹೋದರರೆಂದು ಸುಳ್ಳು ಮಾಹಿತಿ ನೀಡಿರುತ್ತಾರೆ, ವಾಸ್ತವವಾಗಿ ನಾಯ್ಕರ ಗೋಣೆಮ್ಮಳಿಗೆ ಯಾರೂ ಸಹೋದರರು ಇರುವುದಿಲ್ಲಾ ಆದ್ದರಿಂದ ವಾದಿಯ ಕೋರಿಕೆಯನ್ನು ತಿರಸ್ಕರಿಸುವಂತೆ ವಿನಂತಿಸಿರುತ್ತಾರೆ.

ಪ್ರತಿವಾದಿಯ ಮೌಖಿಕ ವಾದದ ಪ್ರಕಾರ, ವಾದಿಯು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ,

1.ಪ್ರಶ್ನಿತ ಜಮೀನಿನ ಹಾಲಿ ಪಹಣಿ ದಾಖಲೆಯಲ್ಲಿ ಪಟ್ಟಾದಾರರ ಹೆಸರು ತಳವಾರ ಸಣ್ಣ ಹನ್ಮಪ್ಪ, ದೊಡ್ಡ ಹನ್ಮಪ್ಪ – ಗುಳೇದಾಳು ಎಂದು ದಾಖಲೆ ಇದ್ದು ತಂದೆ ತಾಯಿಯ ಹೆಸರು ಇರುವುದಿಲ್ಲಾ.

2.ವಂಶವೃಕ್ಷ ಧೃಡೀಕರಣ ಪತ್ರ ಸಂ/ಆರ್.ಡಿ.0038484066999 ದಿನಾಂಕ:17.03.2016ರ ದಾಖಲೆಯಲ್ಲಿ ವಂಶವೃಕ್ಷದ ಕುರಿತು ನೀಡಿರುವ ಪ್ರಮಾಣ ಪತ್ರ ಇ ಸ್ಟ್ಯಾಂಪ್ ಪತ್ರ ಸಂ:ಕೆ.ಎ.139461882064920; ದಿ:08.03.2016 ಎಂದು ದಾಖಾಲಾಗಿರುತ್ತದೆ, ಆದರೆ ಅರ್ಜಿದಾರರು ಇ ಸ್ಟ್ಯಾಂಪ್ ಪತ್ರದ ಸಂ/ಕೆ.ಎ.982871455805340, ದಿ:05.02.2016 ರ ವಶವೃಕ್ಷದ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಇದರಿಂದ ವಂಶವೃಕ್ಷ ಪ್ರಮಾಣ ಪತ್ರದ ಮಾಹಿತಿಯು ಮೇಲ್ನೋಟಕ್ಕೆ ಸಂಶಯಾಸ್ಪದವೆಂದು ಕಂಡುಬರುತ್ತದೆ.

3.ವಾದಿಯು ಸಲ್ಲಿಸಿರುವ ವಂಶವೃಕ್ಷ ದಾಖಲೆಯ ಪ್ರಕಾರ, ಹಾಲಿ ಪಟ್ಟಾದಾರರು ನಾಯ್ಕರ ಗೋಣೆಮ್ಮ ಇವರ ಸಹೋದರರೆಂದು ಮತ್ತು ಅವಿವಾಹಿತರೆಂದು ತಿಳಿಸಲಾಗಿರುತ್ತದೆ, ಆದರೆ ಪ್ರತಿವಾದಿಯು ಮೌಖಿಕ ವಾದದಲ್ಲಿ ಹಾಲಿ ಪಟ್ಟಾದಾರರು ವಿವಾಹಿತರಾಗಿದ್ದು, ನಾಯ್ಕರ ಗೋಣೆಮ್ಮನ ಸಹೋದರರು ಆಗಿರುವುದಿಲ್ಲಾ, ನಾಯ್ಕರ ಗೋಣೆಮ್ಮಗೆ ಯಾರೂ ಸಹೋದರರು ಇರುವುದಿಲ್ಲಾ ಎಂದು ತಿಳಿಸಿರುತ್ತಾರೆ.

4.ವಾದಿಯು ಸಲ್ಲಿಸಿರುವ ವಂಶವೃಕ್ಷ ದಾಖಲೆ ಮತ್ತು ಪ್ರತಿವಾದಿಯು ನೀಡಿರುವ ಮಾಹಿತಿ ಪ್ರಕಾರ ಮೂಲ ಪಟ್ಟಾದಾರರ ವಂಶವೃಕ್ಷದ ಮಾಹಿತಿಯು ಗೊಂದಲಮಯವಾಗಿದ್ದು, ವಾದಿಯು ಸಲ್ಲಿಸಿರುವ ವಂಶವೃಕ್ಷ ದಾಖಲೆಯು ಸಂಶಯಾಸ್ಪದವಾಗಿರುತ್ತದೆ. ಪ್ರತಿವಾದಿಯು ನೀಡಿರುವ ತಕರಾರು ಬಗ್ಗೆ ವಾದಿಯು ವಿಚಾರಣೆ ಸಮಯದಲ್ಲಿ ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲಾ.

ಮೇಲಿನ ಎಲ್ಲಾ ಅಂಶಗಳಿಂದ ವಾದಿಯ ಹಕ್ಕುಬದಲಾವಣೆ ಅರ್ಜಿಯನ್ನು ತಿರಸ್ಕರಿಸುವುದು ಸಮಂಜಸವೆಂದು ಕಂಡುಬಂದಿರುವುದರಿಂದ ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಹಲಗಾಪುರ ಗ್ರಾಮದ ಸರ್ವೆ ನಂ.419/ಬಿ ವಿ: 04.00 ಎಕರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕುಬದಲಾವಣೆ ಕೋರಿ ವಾದಿಯು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸುತ್ತಾ ಪಹಣಿದಾಖಲೆಯಲ್ಲಿ ಯಥಾಸ್ಥಿತಿ ಮುಂದುವರಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: ೩೦ .06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

ಗೆ,
ವಾದಿ/ಪ್ರತಿವಾದಿಗೆ

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಪ್ರತಿಯನ್ನು:
ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.

1/8/16